ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ 54ನೇ ಸಭೆಯು** ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಜನವರಿ 07ರಂದು ಮಂಗಳವಾರ ಬೆಳಿಗ್ಗೆ 11.30 ಗಂಟೆಗೆ** ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

ಹಾಜರಿದ್ದವರು:

| | |
|---|---|
| ೧. **ಪ್ರೊ. ವಿ. ಗಿರೀಶ್ ಚಂದ್ರ**, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. **ಶ್ರೀಮತಿ ಸುಜಾತ ಗೌಡ**, ಬೆಂಗಳೂರು | ಸದಸ್ಯರು |
| ೩. **ಶ್ರೀ ಶಿವಕುಮಾರ್ ಎನ್.**, ಬೆಂಗಳೂರು | ಸದಸ್ಯರು |
| ೪. **ಡಾ. ಸಿದ್ಧಲಿಂಗ ಶಿವಚಾರ್ಯ ಮಹಾಸ್ವಾಮಿಗಳು, ಕವಲೇದುರ್ಗ** | ಸದಸ್ಯರು |
| ೫. **ಶ್ರೀ ಡಿ.ಪಿ ಅನಂತ**, ಬೆಂಗಳೂರು | ಸದಸ್ಯರು |
| ೬. **ಶ್ರೀಮತಿ ಭವಾನಿ ಹೆಗಡೆ**, ಬೆಂಗಳೂರು | ಸದಸ್ಯರು |
| ೭. **ಡಾ. ಸಿ. ನಂಜುಂಡಯ್ಯ**, ಆದಿಚುಂಚನಗಿರಿ | ಸದಸ್ಯರು |
| ೮. **ಡಾ. ಬಿ. ಶೈಲಶ್ರೀ**, ಬೆಂಗಳೂರು | ಸದಸ್ಯರು |
| ೯. **ಡಾ. ಸಿದ್ಧಿಕ್ ಮುಕ್ಕಮಿಲ್ ಅಹಮದ್**, ಬೆಂಗಳೂರು | ಸದಸ್ಯರು |
| ೧೦. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| – ಪರವಾಗಿ **ಶ್ರೀಮತಿ ಕಾವ್ಯಶ್ರೀ ಎಂ**, ಸಹಾಯಕ ನಿರ್ದೇಶಕರು | ಸದಸ್ಯರು |
| ೧೧. **ಪ್ರೊ. ವೀರನಾರಾಯಣ ಎನ್.ಕೆ ಪಾಂಡುರಂಗಿ**, ಕುಲಸಚಿವರು(ಪ್ರ) | ಸದಸ್ಯ ಕಾರ್ಯದರ್ಶಿ |

ಗೈರುಹಾಜರಿ:

| | |
|---|---|
| ೧. **ಅಪರ ಮುಖ್ಯ ಕಾರ್ಯದರ್ಶಿಗಳು**, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೨. **ಉಪ ಕಾರ್ಯದರ್ಶಿಗಳು**, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೩. **ಕಾರ್ಯದರ್ಶಿಗಳು**, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. **ಪ್ರಾದೇಶಿಕ ನಿರ್ದೇಶಕರು**, ಯುಜಿಸಿ–ನೈಋತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು–09 | ಸದಸ್ಯರು |
| ೫. **ಆಯುಕ್ತರು**, ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001 | ಸದಸ್ಯರು |
| ೬. **ನಿರ್ದೇಶಕರು**, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001 | ಸದಸ್ಯರು |
| ೭. **ನಿರ್ದೇಶಕರು**, ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು–560001 | ಸದಸ್ಯರು |
| ೮. **ನಿರ್ದೇಶಕರು**, ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು–560012 | ಸದಸ್ಯರು |
| ೯. **ನಿರ್ದೇಶಕರು**, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009 | ಸದಸ್ಯರು |
| ೧೦. **ಆಯುಕ್ತರು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಂಡಿತವಾಗಿ ನಿರ್ಣಯಗೊಂಡವು.

## 2020ರ ಜನವರಿ 07ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) 54ನೇ ಸಭೆಯ ನಡಾವಳಿ

| ವಿ.ಸಂ. | ವಿಷಯ ಮತ್ತು ಟಿಪ್ಪಣಿ ಮತ್ತು ನಿರ್ಣಯ |
|---|---|
| **ವಿಷಯ 01** | **ಪ್ರಶಾಸನ ಸಮಿತಿ 53ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 53ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 12.09.2019ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನೆಗಳನ್ನು ಸಿದ್ಧಪಡಿಸಿ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಪ್ರಶಾಸನ ಸಮಿತಿ 53ನೇ ಸಭೆಯ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು.** |

| | |
|---|---|
| ವಿಷಯ 02 | **'ಹಣಕಾಸು ಸಮಿತಿ' 34&35ನೇ ಸಭೆಯ ನಡಾವಳಿಗಳನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಹಣಕಾಸು ಸಮಿತಿ' 34ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 21.11.2019ರಂದು ನಡೆಯಿತು. ಆ ಸಭೆಯ ನಡಾವಳಿಗಳನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **'ಹಣಕಾಸು ಸಮಿತಿ' 34 & 35ನೇ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.** |
| ವಿಷಯ 03 | **ವಿಶ್ವವಿದ್ಯಾಲಯದ ಎಂಟನೇ ದೀಕ್ಷಾಂತ ಘಟಿಕೋತ್ಸವ ಕಾರ್ಯಕ್ರಮ ನಡೆಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಏಳನೇ ದೀಕ್ಷಾಂತ ಘಟಿಕೋತ್ಸವ ಕಾರ್ಯಕ್ರಮವನ್ನು ದಿನಾಂಕ: 31.01.2019ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಸಲಾಗಿತ್ತು. ಈಗ 2018–19 ನೇ ಶೈಕ್ಷಣಿಕ ವರ್ಷದ ಘಟಿಕೋತ್ಸವವನ್ನು ಫೆಬ್ರವರಿ ಅಥವಾ ಮಾರ್ಚ್ ತಿಂಗಳಿನಲ್ಲಿ ನಡೆಸಬಹುದಾಗಿದ್ದು, ಸುಮಾರು 3.00 ಲಕ್ಷ ರೂಗಳನ್ನು ಅಂದಾಜಿಸಲಾಗಿದೆ. 8ನೇ ಘಟಿಕೋತ್ಸವ ಕಾರ್ಯಕ್ರಮ ನಡೆಸಲು ಮತ್ತು ಕಾರ್ಯಕ್ರಮದ ಅಂದಾಜು ವೆಚ್ಚಕ್ಕೆ ಅನುಮೋದನೆ ಕೋರಿ ಪ್ರಶಾಸನ ಸಮಿತಿಯಲ್ಲಿ ವಿಷಯ ಮಂಡಿಸಿದೆ. |
| ನಿರ್ಣಯ | **ವಿಶ್ವವಿದ್ಯಾಲಯದ ಎಂಟನೇ ದೀಕ್ಷಾಂತ ಘಟಿಕೋತ್ಸವ ಕಾರ್ಯಕ್ರಮ ನಡೆಸಲು 3.00 ಲಕ್ಷರೂಪಾಯಿಗಳ ಅಂದಾಜು ಮೊತ್ತಕ್ಕೆ ಸಭೆಯು ಅನುಮತಿ ನೀಡಿತು.** |
| ವಿಷಯ 04 | **ವಿಶ್ವವಿದ್ಯಾಲಯದ "ದಶಮಾನೋತ್ಸವ" ಕಾರ್ಯಕ್ರಮ ಆಯೋಜಿಸುವ ಬಗೆಗೆ,**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2010 ಮೇ 10 ರಂದು ಸ್ಥಾಪನೆಯಾಗಿರುತ್ತದೆ. ಇದೇ ಬರುವ 2020ರ ಮೇ 10ಕ್ಕೆ ವಿಶ್ವವಿದ್ಯಾಲಯವು ಸ್ಥಾಪನೆಯಾಗಿ 10 ವರ್ಷಗಳಾಗುತ್ತಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಸಾಧನೆಗಳ ಅನಾವರಣಕ್ಕಾಗಿ ಮತ್ತು ಹೆಚ್ಚಿನ ಪ್ರಚಾರಕ್ಕಾಗಿ **"ದಶಮಾನೋತ್ಸವ"** ಕಾರ್ಯಕ್ರಮ ಹಮ್ಮಿಕೊಳ್ಳಬಹುದಾಗಿದೆ. ಈ ಪ್ರಯುಕ್ತ ವಿಶ್ವವಿದ್ಯಾಲಯದ ವತಿಯಿಂದ ಉತ್ತಮ ಗುಣಮಟ್ಟದ ಪುಸ್ತಕಗಳ ಪ್ರಕಾಶನ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಬಹುದಾಗಿದ್ದು 4.00 ಲಕ್ಷ ರೂಗಳ ವೆಚ್ಚದಲ್ಲಿ ಈ ಕಾರ್ಯಕ್ರಮಗಳನ್ನು ನಡೆಸಬಹುದಾಗಿದೆ. ಈ ಕಾರ್ಯಕ್ರಮಕ್ಕೆ ಅನುಮತಿ ಕೋರಿ ಪ್ರಶಾಸನ ಸಮಿತಿಯಲ್ಲಿ ವಿಷಯ ಮಂಡಿಸಿದೆ. |
| ನಿರ್ಣಯ | **4.00 ಲಕ್ಷ ರೂಗಳ ವೆಚ್ಚದಲ್ಲಿ ವಿಶ್ವವಿದ್ಯಾಲಯದ "ದಶಮಾನೋತ್ಸವ" ಕಾರ್ಯಕ್ರಮ ಆಯೋಜಿಸಲು ಸಭೆಯು ಒಪ್ಪಿದೆ. 10 ಪ್ರಸಿದ್ಧ ಸಂಸ್ಕೃತ ವಿದ್ವಾಂಸರಿಗೆ ಸನ್ಮಾನ ಮಾಡಲು ತಿಳಿಸಲಾಯಿತು.** |
| ವಿಷಯ 05 | **IQAC (ಆಂತರಿಕ ಗುಣಮಟ್ಟ ಪರಿಶೀಲನಾ ಸಮಿತಿ) ರಚನೆ ಕುರಿತು,**<br>ವಿಶ್ವವಿದ್ಯಾಲಯವು ಪ್ರಾರಂಭವಾಗಿ 10 ವರ್ಷಗಳಾದ ಹಿನ್ನೆಲೆಯಲ್ಲಿ NAAC ಭೇಟಿಯು ಅನಿವಾರ್ಯವಾಗಿರುತ್ತದೆ. NAAC ಪರಿಶೀಲನಾ ಅವಧಿಯಲ್ಲಿ ಅತ್ಯಂತ ಪರಿಷ್ಕೃತ ವರದಿಗಳನ್ನು ಮತ್ತು ದಾಖಲೆಗಳನ್ನು ನೀಡಬೇಕಾಗಿರುತ್ತದೆ. ಆದ್ದರಿಂದ IQAC (ಆಂತರಿಕ ಗುಣಮಟ್ಟ ಪರಿಶೀಲನಾ ಸಮಿತಿ) ಯನ್ನು ರಚಿಸಬೇಕಿರುವುದರಿಂದ ಇದನ್ನು ಪ್ರಶಾಸನ ಸಮಿತಿಯ ಸಭೆಯಲ್ಲಿ ಮಂಡಿಸಿದೆ. |
| ನಿರ್ಣಯ | ನಿಯಮಾನುಸಾರ **IQAC (ಆಂತರಿಕ ಗುಣಮಟ್ಟ ಪರಿಶೀಲನಾ ಸಮಿತಿ) ರಚಿಸಲು ಸಭೆಯು ಒಪ್ಪಿದೆ.** |
| ವಿಷಯ 06 | **ಕಾಲೇಜುಗಳ ಸಂಯೋಜನೆ ಕುರಿತು ಏಕರೂಪದ ಪರಿನಿಯಮಾವಳಿಯನ್ನು ರಚಿಸಲು ಅನುಮತಿ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2010ರಲ್ಲಿ ಪ್ರಾರಂಭಗೊಂಡಿದ್ದು, ಈ ಹಿಂದೆ ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ ಸಂಸ್ಕೃತ ಕಾಲೇಜುಗಳು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಈ ಕಾಲೇಜುಗಳಿಗೆ ಅನುಮತಿ ಮತ್ತು ಮಾನ್ಯತೆಯ ವಿಚಾರವಾಗಿ ಈ ಹಿಂದೆ ಜಾರಿಯಲ್ಲಿದ್ದ Grant In Aid:1976ನ್ನು ಪಾಲಿಸಲಾಗುತ್ತಿತ್ತು. ಆದರೆ ವಿಶ್ವವಿದ್ಯಾಲಯ ಸ್ಥಾಪನೆಗೊಂಡದ್ದರಿಂದ ಈ ವಿಶ್ವವಿದ್ಯಾಲಯವು UGC 2f ಮಾನ್ಯತೆ ಹೊಂದಿರುವುದರಿಂದ UGC ಮತ್ತು ಸರ್ಕಾರದ ಕಾಲಿಕ ಆದೇಶ ಮತ್ತು ನಿಯಮಾವಳಿಗಳನ್ನು ವಿಶ್ವವಿದ್ಯಾಲಯವು ಪಾಲಿಸಬೇಕಾದ್ದರಿಂದ ವಿಶ್ವವಿದ್ಯಾಲಯವು Statute of Karnataka Samskrit University Affiliation To Colleges (Grant of Affiliation of Colleges and Institutions and Withdrawals of Such Affiliation) ನಿಯಮಾವಳಿಗಳನ್ನು ರಚಿಸಲಾಗಿತ್ತು. ಈ ನಿಯಮಾವಳಿಗೆ ಮಾನ್ಯ ಘನತೆವೆತ್ತ ರಾಜ್ಯಪಾಲರಿಂದ ಅಂಕಿತ ದೊರೆತಿರುತ್ತದೆ. ಆದರೆ ಸರ್ಕಾರದ ಪತ್ರ ಸಂಖ್ಯೆ: ಇಡಿ 240 ಯುಎನ್ಇ 2019, ದಿನಾಂಕ: 19.12.2019ರಂತೆ ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳಿಗೂ ಏಕರೂಪವಾದ ಸಂಯೋಜನೆ ಪರಿನಿಯಮಾವಳಿಯನ್ನು ರೂಪಿಸುವಂತೆ ರಚಿಸಿ ಸದರಿ ಪರಿನಿಯಮಾವಳಿಯ ಕರಡನ್ನು ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ನೂತನ ಪರಿನಿಯಮಾವಳಿಯನ್ನು ರಚಿಸಲು ಅನುಮತಿ ಕೋರಿ ಸಭೆಯಲ್ಲಿ ವಿಷಯ ಮಂಡಿಸಿದೆ. |
| ನಿರ್ಣಯ | **ಕಾಲೇಜುಗಳ ಸಂಯೋಜನೆ ಕುರಿತು ಏಕರೂಪದ ಪರಿನಿಯಮಾವಳಿಯನ್ನು ಅನುಮೋದಿಸಿ ಅಳವಡಿಸಲು ಪ್ರಶಾಸನ ಸಮಿತಿಯು ಅನುಮತಿ ನೀಡಿತು. ಎಲ್ಲ ಕಾಲೇಜುಗಳಿಗೆ ಪರಿನಿಯಮಾವಳಿಯನ್ನು ಅನ್ವಯಿಸಲು ಮೂರು ತಿಂಗಳುಗಳ ಕಾಲಾವಕಾಶ ನೀಡಲು ಸಭೆಯು ತಿಳಿಸಿತು.** |

| | |
|---|---|
| ವಿಷಯ 07 | **ಸಂಸ್ಕೃತ ಮಹಾಕವಿಗಳ ಚಿತ್ರಶಾಲೆ ರಚಿಸುವ ಬಗೆಗೆ,**<br>ವಿಶ್ವವಿದ್ಯಾಲಯದ ನೂತನ ಕಟ್ಟಡಗಳಲ್ಲಿ ಸಂಸ್ಕೃತದ ಮಹಾಕವಿಗಳ ಚಿತ್ರಗಳನ್ನು ಬಿಡಿಸಿ ಪ್ರದರ್ಶನ ಮಾಡಬಹುದಾಗಿದೆ ಮತ್ತು ಆಡಳಿತ ಕೊಠಡಿಗಳಲ್ಲಿ ಸೂಕ್ತಿಗಳನ್ನು ಬರೆಸಬಹುದಾಗಿದ್ದು ಇದಕ್ಕೆ ಅಂದಾಜು 2.00 ಲಕ್ಷ ರೂಗಳಾಗಬಹುದಾಗಿದೆ. ಇದರ ಅನುಮೋದನೆಗಾಗಿ ಪ್ರಶಾಸನ ಸಮಿತಿಯ ಸಭೆಯಲ್ಲಿ ಮಂಡಿಸಿದೆ. |
| ನಿರ್ಣಯ | **ಪ್ರಾಯೋಜಕರ ಸಹಯೋಗದೊಂದಿಗೆ ಸಂಸ್ಕೃತ ಮಹಾಕವಿಗಳ ಚಿತ್ರಶಾಲೆ ರಚಿಸಲು ಸಭೆಯು ಒಪ್ಪಿಗೆ ನೀಡಿತು.** |
| ವಿಷಯ 08 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ವಿವಿಧ ಸಂಸ್ಥೆಗಳ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪ್ರವರ್ಧಮಾನಕ್ಕೆ ಬರುತ್ತಿರುವ ಸಂಸ್ಥೆಯಾಗಿದ್ದು, ಶೈಕ್ಷಣಿಕ ಅಭಿವೃದ್ಧಿಗಾಗಿ ವಿವಿಧ ಸಂಸ್ಥೆಗಳ ಸಹಯೋಗವನ್ನು ಬಯಸುತ್ತದೆ. ಅಂತೆಯೇ ವಿವಿಧ ಸಂಸ್ಥೆಗಳು ತಮ್ಮ ಕ್ಷೇತ್ರದ ಸಂಶೋಧನೆ ಮತ್ತು ಗ್ರಹಿಕೆಗಳಿಗಾಗಿ ಸಂಸ್ಕೃತ ಭಾಷೆಯನ್ನು ಅಪೇಕ್ಷಿಸುತ್ತದೆ. ಆದ್ದರಿಂದ ಭಾರತೀಯ ವಿದ್ಯಾ ಭವನ – ಬೆಂಗಳೂರು, ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ – ತಿರುಪತಿ, ಫ್ರೆಂಚ್ ಇನ್ಸ್ಟಿಟ್ಯೂಟ್– ಪಾಂಡಿಚೇರಿ, ಜೈನ್ ವಿಶ್ವವಿದ್ಯಾಲಯ, ಪೂರ್ಣಪ್ರಜ್ಞ ಸಂಶೋಧನ ಮಂದಿರ – ಬೆಂಗಳೂರು ಈ ಮುಂತಾದ ಸಂಸ್ಥೆಗಳ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳಬಹುದಾಗಿದ್ದು, ಇದನ್ನು ಪ್ರಶಾಸನ ಸಮಿತಿಯ ಸಭೆಯಲ್ಲಿ ಮಂಡಿಸಿದೆ. |
| ನಿರ್ಣಯ | **ವಿವಿಧ ಸಂಸ್ಥೆಗಳ ಜೊತೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಒಡಂಬಡಿಕೆ ಮಾಡಿಕೊಳ್ಳಲು ಸಭೆಯು ಒಪ್ಪಿತು.** |
| ವಿಷಯ 09 | **ವಿಶ್ವವಿದ್ಯಾಲಯದ ಬೋಧಕ–ಬೋಧಕೇತರ ನೌಕರರ ಅವಲಂಬಿತರಿಗೆ ವೈದ್ಯಕೀಯ ವೆಚ್ಚ ಮರುಪಾವತಿ ಮಾಡುವ ಕುರಿತು.**<br>ವಿಶ್ವವಿದ್ಯಾಲಯದ ಬೋಧಕ–ಬೋಧಕೇತರ ನೌಕರರ ವೈದ್ಯಕೀಯ ವೆಚ್ಚವನ್ನು ಈಗಾಗಲೇ ಮರುಪಾವತಿ ಮಾಡಲಾಗುತ್ತಿದೆ. ಕರ್ನಾಟಕ ಸರ್ಕಾರಿ ನೌಕರರ ವೈದ್ಯಕೀಯ ವೆಚ್ಚ ಮರುಪಾವತಿ/ನಿಯಮಾವಳಿ 1963ರಂತೆ ಸರ್ಕಾರಿ ನೌಕರರ ಅವಲಂಬಿತರಿಗೂ ವೈದ್ಯಕೀಯ ವೆಚ್ಚವನ್ನು ಪುನರ್ಭರಣ ಮಾಡುವ ಸೌಲಭ್ಯವಿರುತ್ತದೆ. ಈ ಸೌಲಭ್ಯವು ಇದುವರೆಗೂ ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಅನ್ವಯವಾಗಿರಲಿಲ್ಲ. ಆದ್ದರಿಂದ ದಿನಾಂಕ: 02.12.2019 ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಬ್ಬಂದಿಗಳು ಅವಲಂಬಿತರಿಗೂ ವೈದ್ಯಕೀಯ ವೆಚ್ಚ ಮರುಪಾವತಿ ಸೌಲಭ್ಯ ವಿಸ್ತರಿಸುವಂತೆ ಮನವಿ ಮಾಡಿಕೊಂಡಿರುತ್ತಾರೆ. ಅದರಂತೆ ಈ ವಿಷಯಕ್ಕೆ ಅನುಮತಿ ಕೋರಿ ಪ್ರಶಾಸನ ಸಮಿತಿಯ ಸಭೆಯಲ್ಲಿ ಮಂಡಿಸಿದೆ. |
| ನಿರ್ಣಯ | **ವಿಶ್ವವಿದ್ಯಾಲಯದ ಬೋಧಕ–ಬೋಧಕೇತರ ನೌಕರರ ಅವಲಂಬಿತರಿಗೆ ವೈದ್ಯಕೀಯ ವೆಚ್ಚ ಮರುಪಾವತಿ ಮಾಡುವ ಕುರಿತಾಗಿ ಬಜೆಟ್ ನಲ್ಲಿ ಸೇರಿಸಿ ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಪ್ಪಿದೆ.** |
| ವಿಷಯ 10 | **"ಭಾರತೀಯ ದರ್ಶನಗಳ ಸಮನ್ವಯ ಗ್ರಂಥ ಶ್ರೀ ಸಿದ್ಧಾಂತ ಶಿಖಾಮಣಿ" ವಿಚಾರ ಸಂಕಿರಣಕ್ಕೆ ಧನ ಸಹಾಯ ನೀಡುವ ಬಗೆಗೆ.**<br>ದಿನಾಂಕ: 18.02.2019 ರಿಂದ 19.02.2019ರವರೆಗೆ ಕಾಶಿಯ ಶೈವಭಾರತೀ ಶೋಧ ಪ್ರತಿಷ್ಠಾನ, ಜಂಗಮವಾಡಿಮಠ, ವಾರಣಾಸಿ– ಈ ಸಂಸ್ಥೆಯ ವತಿಯಿಂದ "ಭಾರತೀಯ ದರ್ಶನಗಳ ಸಮನ್ವಯ ಗ್ರಂಥ ಶ್ರೀ ಸಿದ್ಧಾಂತ ಶಿಖಾಮಣಿ" ಕುರಿತಾದ ವಿಚಾರ ಸಂಕಿರಣ ನಡೆಯಲಿದೆ. ಈ ವಿಚಾರ ಸಂಕಿರಣವನ್ನು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ನಡೆಸುವಂತೆ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿಗಳವರು ಜಂಗಮವಾಡಿಮಠ, ಕಾಶೀ ಇವರು ಮನವಿ ಮಾಡಿರುತ್ತಾರೆ. ಅದರಂತೆ 1.00.000 ರೂಗಳನ್ನು ಈ ವಿಚಾರಸಂಕಿರಣಕ್ಕಾಗಿ ಬಿಡುಗಡೆ ಮಾಡಲು ಅನುಮತಿ ನೀಡಲಾಗಿದೆ. ಈ ವಿಷಯಕ್ಕೆ ಘಟನೋತ್ತರ ಅನುಮತಿ ಕೋರಿ ಪ್ರಶಾಸನ ಸಮಿತಿಯ ಸಭೆಯಲ್ಲಿ ಮಂಡಿಸಿದೆ. |
| ನಿರ್ಣಯ | **"ಭಾರತೀಯ ದರ್ಶನಗಳ ಸಮನ್ವಯ ಗ್ರಂಥ ಶ್ರೀ ಸಿದ್ಧಾಂತ ಶಿಖಾಮಣಿ" ವಿಚಾರ ಸಂಕಿರಣಕ್ಕೆ 1.00 ಲಕ್ಷ ರೂಪಾಯಿಗಳ ಧನಸಹಾಯ ನೀಡಿರುವುದಕ್ಕೆ ಪ್ರಶಾಸನ ಸಮಿತಿಯ ಸಭೆಯು ಘಟನೋತ್ತರ ಅನುಮತಿ ನೀಡಿದೆ.** |
| ವಿಷಯ 11 | **"ಅಖಿಲ ಭಾರತೀಯ ಪ್ರಾಚ್ಯವಿದ್ಯಾ ಸಮ್ಮೇಲನ"ಕ್ಕೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರತಿನಿಧಿಗಳನ್ನು ಕಳುಹಿಸುವ ಬಗೆಗೆ.**<br>ಕವಿಕುಲಗುರು ಕಾಳಿದಾಸ ಸಂಸ್ಕೃತ ವಿಶ್ವವಿದ್ಯಾಲಯ, ನಾಗಪುರ, ಮಹಾರಾಷ್ಟ್ರ – ಇಲ್ಲಿ ಜನವರಿ 10 ರಿಂದ 12ರವರೆಗೆ ಮೂರು ದಿನಗಳ ಕಾಲ 50ನೇ ಅಖಿಲ ಭಾರತೀಯ ಪ್ರಾಚ್ಯವಿದ್ಯಾ ಸಮ್ಮೇಲನ ನಡೆಯಲಿದೆ. ಈ ಪ್ರತಿಷ್ಠಿತ ಸಮ್ಮೇಳನಕ್ಕೆ ವಿಶ್ವವಿದ್ಯಾಲಯದ ವತಿಯಿಂದ 10 ಬೋಧಕ ಸಿಬ್ಬಂದಿಗಳನ್ನು ಕಳುಹಿಸಲಾಗುತ್ತಿದೆ. ಈ ಸಿಬ್ಬಂದಿಗಳ ನೋಂದಣಿ ಶುಲ್ಕವೆಂದು 25.000 ರೂಗಳನ್ನು ವಿಶ್ವವಿದ್ಯಾಲಯವು ಈಗಾಗಲೇ ಪಾವತಿಸಿರುತ್ತದೆ. ಸಿಬ್ಬಂದಿಗಳ ವೇತನಶ್ರೇಣಿಗೆ ಅನುಗುಣವಾಗಿ ಪ್ರಯಾಣ ಭತ್ಯೆಯನ್ನು ವಿಶ್ವವಿದ್ಯಾಲಯದಿಂದ ನೀಡಬಹುದಾಗಿದೆ. ಈ ವಿಷಯಕ್ಕೆ ಅನುಮೋದನೆ ಕೋರಿ ಪ್ರಶಾಸನ ಸಮಿತಿಯ ಸಭೆಯಲ್ಲಿ ಮಂಡಿಸಿದೆ. |
| ನಿರ್ಣಯ | **"ಅಖಿಲ ಭಾರತೀಯ ಪ್ರಾಚ್ಯವಿದ್ಯಾ ಸಮ್ಮೇಲನ"ಕ್ಕೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರತಿನಿಧಿಗಳಾಗಿ ಕಳುಹಿಸಲ್ಪಟ್ಟ 10 ಬೋಧಕ ಸಿಬ್ಬಂದಿಗಳಿಗೆ ನಿಯಮಾನುಸಾರ ನೋಂದಣಿ ಶುಲ್ಕ ಮತ್ತು ಪ್ರಯಾಣಭತ್ಯೆಯನ್ನು ಪಾವತಿಸಲು ಸಭೆಯು ಒಪ್ಪಿದೆ.** |

| | |
|---|---|
| ವಿಷಯ 12 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ನೂತನ ಹಣಕಾಸು ಅಧಿಕಾರಿಗಳನ್ನು ನೇಮಕ ಮಾಡಿರುವ ಬಗೆಗೆ.**<br>ಶ್ರೀ ಪಂಚಲಿಂಗಸ್ವಾಮಿ ಎಸ್., ಸಹಾಯಕ ನಿಯಂತ್ರಕರು (ಪರೀಕ್ಷಾ), ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು ಇವರನ್ನು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 151 ರಾಲೆಪ 2019 ದಿನಾಂಕ: 25.11.2019ರಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಅಧಿಕ ಪ್ರಭಾರದಲ್ಲಿರಿಸಿ ಹಣಕಾಸು ಅಧಿಕಾರಿಗಳಾಗಿ ನೇಮಕ ಮಾಡಿರುತ್ತಾರೆ. ಇವರು ದಿನಾಂಕ: 02.12.2019 ರಂದು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಈ ವಿಚಾರವನ್ನು ಪ್ರಶಾಸನ ಸಮಿತಿಯ ಗಮನಕ್ಕೆ ಸಲ್ಲಿಸಿದೆ. |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ನೂತನ ಹಣಕಾಸು ಅಧಿಕಾರಿಗಳನ್ನು ನೇಮಕ ಮಾಡಿರುವುದನ್ನು ಪ್ರಶಾಸನ ಸಮಿತಿಯು ಗಮನಿಸಿತು.** |
| ವಿಷಯ 13 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಬಿ.ಎಡ್ ಕೋರ್ಸ್ ಪ್ರಾರಂಭಿಸುವ ಬಗೆಗೆ.**<br>ಕರ್ನಾಟಕ ರಾಜ್ಯದಲ್ಲಿ ಬಿ.ಎಡ್ ತರಬೇತಿ ಕೋರ್ಸ್ ಶೃಂಗೇರಿಯ ರಾಜೀವ ಗಾಂಧೀ ಪರಿಸರದಲ್ಲಿ ಮಾತ್ರ ಇರುತ್ತದೆ. ಸೀಮಿತ ಸಂಖ್ಯೆಯ ವಿದ್ಯಾರ್ಥಿಗಳಿಗೆ ಮಾತ್ರ ಇಲ್ಲಿ ಅವಕಾಶವಿರುತ್ತದೆ. ಇದು ವೃತ್ತಿ ಶಿಕ್ಷಣವಾದ್ದರಿಂದ ಈ ಕೋರ್ಸಗೆ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗುವ ನಿರೀಕ್ಷೆಯಿದೆ. ಆದ್ದರಿಂದ ನಮ್ಮ ವಿಶ್ವವಿದ್ಯಾಲಯದಲ್ಲಿ ಸೂಕ್ತ ಸ್ಥಳದಲ್ಲಿ ಬಿ.ಎಡ್ ಕೋರ್ಸ್ ಆರಂಭಿಸಲು ಅನುಮತಿ ಕೋರಿ ಸಭೆಯಲ್ಲಿ ವಿಷಯ ಮಂಡಿಸಿದೆ. |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಬಿ.ಎಡ್ ಕೋರ್ಸ್ ಪ್ರಾರಂಭಿಸಲು ಸಭೆಯು ಒಪ್ಪಿಗೆ ನೀಡಿದೆ. ಹಾಗೂ ಇದರ ಅನುಷ್ಠಾನಕ್ಕಾಗಿ ಸರ್ಕಾರಕ್ಕೆ ಪತ್ರ ಬರೆದು ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಯನ್ನು ಆರಂಭಿಸಲು ಸಭೆಯು ಸೂಚಿಸಿತು.** |
| ವಿಷಯ 14 | **ವಿಶ್ವವಿದ್ಯಾಲಯದಲ್ಲಿ ವೈಜ್ಞಾನಿಕ ಗ್ರಂಥ ಮತ್ತು ವಿಷಯಗಳ ವ್ಯಾಖ್ಯಾನಮಾಲೆಯನ್ನು ಆಯೋಜಿಸುವ ಬಗೆಗೆ.**<br>ಸಂಸ್ಕೃತ ಭಾಷೆಯಲ್ಲಿ ಬರೆಯಲ್ಪಟ್ಟಿರುವ ಅನೇಕ ಪ್ರಾಚೀನ ಗ್ರಂಥಗಳಲ್ಲಿ ವಿಜ್ಞಾನದ ಕುರಿತಾದ ಅನೇಕ ವಿಷಯಗಳು ಸಂಗ್ರಹಗೊಂಡಿರುತ್ತದೆ. ಆದ್ದರಿಂದ ಆಯುರ್ವೇದ, ಯೋಗ, ವಿಮಾನಶಾಸ್ತ್ರ, ಭೌಗೋಳಿಕ ವಿಜ್ಞಾನ, ಜೀವ ವಿಜ್ಞಾನ, ಗಣಿತ ಮುಂತಾದ ವೈಜ್ಞಾನಿಕ ವಿಷಯಗಳನ್ನು ಕುರಿತಾದ ವ್ಯಾಖ್ಯಾನಮಾಲಿಕೆಯನ್ನು ಆಯೋಜಿಸಬಹುದಾಗಿದ್ದು, ಈ ವ್ಯಾಖ್ಯಾನ ಮಾಲಿಕೆಗೆ 60.000ರೂಗಳನ್ನು ಅಂದಾಜಿಸಲಾಗಿದೆ. ಈ ವಿಷಯಕ್ಕೆ ಅನುಮೋದನೆ ಕೋರಿ ಪ್ರಶಾಸನ ಸಮಿತಿ ಸಭೆಯಲ್ಲಿ ಮಂಡಿಸಿದೆ. |
| ನಿರ್ಣಯ | **ವಿಶ್ವವಿದ್ಯಾಲಯದಲ್ಲಿ ವೈಜ್ಞಾನಿಕ ಗ್ರಂಥ ಮತ್ತು ವಿಷಯಗಳ ವ್ಯಾಖ್ಯಾನಮಾಲೆಯನ್ನು ಆಯೋಜಿಸಲು ಅಂದಾಜು ಮೊತ್ತಕ್ಕೆ ಪ್ರಶಾಸನ ಸಮಿತಿಯು ಅನುಮೋದನೆ ನೀಡಿದೆ.** |
| ವಿಷಯ 15 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ "ಭಾರವಿ ಉತ್ಸವ" ಪ್ರಾರಂಭಿಸುವ ಬಗೆಗೆ.<br>ಕರ್ನಾಟಕದಲ್ಲಿ ಹುಟ್ಟಿದ ಸಂಸ್ಕೃತದ ಪ್ರಸಿದ್ಧ ಕವಿಯಾದ ಭಾರವಿಯ ಕುರಿತಾಗಿ 2 ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವೊಂದನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವತಿಯಿಂದ ನಡೆಸಬಹುದಾಗಿದ್ದು, ಸರ್ಕಾರದಿಂದ ಅನುದಾನ ಪಡೆಯಲು ಪ್ರಯತ್ನಿಸಲಾಗುವುದು. ಈ ಸಂಕಿರಣಕ್ಕೆ 1.00 ಲಕ್ಷ ರೂಗಳನ್ನು ಅಂದಾಜಿಸಲಾಗಿದ್ದು, ಈ ಮೊತ್ತಕ್ಕೆ ಅನುಮೋದನೆ ಕೋರಿದೆ. |
| ನಿರ್ಣಯ | **ಪ್ರತಿ ವರ್ಷವೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ "ಭಾರವಿ ಉತ್ಸವ" ನಡೆಸಲು ಸಭೆಯು ಸಂತೋಷಿಸಿದೆ. ಅಶ್ವಘೋಷ ಮುಂತಾದ ಇತರೆ ಪ್ರಸಿದ್ಧ ಕವಿಗಳ ಕುರಿತಾಗಿಯೂ ವಿಚಾರ ಸಂಕಿರಣವನ್ನೇರ್ಪಡಿಸಬಹುದಾಗಿದೆ ಎಂದು ಸೂಚಿಸಿದೆ.** |
| ವಿಷಯ 16 | **ಸಂಸ್ಕಾರಭಾರತೀ ಸಹಯೋಗದೊಂದಿಗೆ ವಿಷ್ಣು ಶ್ರೀಧರ ವಾಕಣಕರ್ ಕುರಿತಾಗಿ ವಿಚಾರಸಂಕಿರಣ ಹಮ್ಮಿಕೊಳ್ಳುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಸಂಸ್ಕಾರಭಾರತೀ, ಕರ್ನಾಟಕ (ರಿ), ಬೆಂಗಳೂರು – ಈ ಸಂಸ್ಥೆಯ ಸಹಯೋಗದೊಂದಿಗೆ ಪ್ರಸಿದ್ಧ ಪ್ರಾಚ್ಯವಸ್ತು ಸಂಶೋಧಕರಾದ ವಿಷ್ಣು ಶ್ರೀಧರ ವಾಕಣಕರ್ ಇವರ ಕುರಿತಾಗಿ ಒಂದು ದಿನದ ವಿಚಾರ ಸಂಕಿರಣ ಹಮ್ಮಿಕೊಳ್ಳಬಹುದಾಗಿದ್ದು, ಈ ಸಂಕಿರಣಕ್ಕೆ 30,000 ರೂಗಳನ್ನು ಅಂದಾಜಿಸಲಾಗಿದ್ದು, ಈ ಮೊತ್ತಕ್ಕೆ ಅನುಮೋದನೆ ಕೋರಿದೆ. |
| ನಿರ್ಣಯ | **ವಿಷ್ಣು ಶ್ರೀಧರ ವಾಕಣಕರ್ ಕುರಿತಾಗಿ ವಿಚಾರಸಂಕಿರಣಕ್ಕೆ 30,000 ರೂಗಳ ವೆಚ್ಚಕ್ಕೆ ಸಭೆಯು ಒಪ್ಪಿಗೆ ನೀಡಿತು.** |
| ವಿಷಯ 17 | **ಹಸ್ತಪ್ರತಿ ಶಾಸ್ತ್ರ ವಿಭಾಗದಿಂದ "ಶಾರದಾಲಿಪಿ ಕಾರ್ಯಶಾಲೆ" ನಡೆಸುವುದಕ್ಕೆ ಅನುಮತಿ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದಿಂದ 07 ದಿನಗಳ ಕಾಲ "ಶಾರದಾ ಲಿಪಿ ಕಾರ್ಯಶಾಲೆ"ಯನ್ನು ಏರ್ಪಡಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸುಮಾರು 50 ವಿದ್ಯಾರ್ಥಿಗಳಿಗೆ ಅವಕಾಶ ಇರಬಹುದಾದ ಈ ಕಾರ್ಯಶಾಲೆಗೆ 78,900 ರೂಗಳನ್ನು ಅಂದಾಜಿಸಲಾಗಿದೆ. ಈ ಮೊತ್ತಕ್ಕೆ ಅನುಮೋದನೆ ಕೋರಿ ವಿಷಯವನ್ನು ಸಭೆಯಲ್ಲಿ ಮಂಡಿಸಿದೆ. |
| ನಿರ್ಣಯ | **"ಶಾರದಾಲಿಪಿ ಕಾರ್ಯಶಾಲೆ" ನಡೆಸಲು ಹಾಗೂ ಅದಕ್ಕೆ ತಗಲುವ ವೆಚ್ಚಕ್ಕೆ ಸಭೆಯು ಒಪ್ಪಿಗೆ ಸೂಚಿಸಿತು.** |

| | |
|---|---|
| ವಿಷಯ 18 | **2018–19ನೇ ಸಾಲಿನ ಅಡಾವೆ ಪತ್ರ (Balance Sheet) ಪರಿಷ್ಕರಿಸಿರುವುದನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2018–19 ನೇ ಸಾಲಿನ ಅಡಾವೆ ಪತ್ರ (Balance Sheet) ಪರಿಷ್ಕರಿಸಿರುವುದನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **2018–19ನೇ ಸಾಲಿನ ಅಡಾವೆ ಪತ್ರ (Balance Sheet) ಪರಿಷ್ಕರಿಸಿರುವುದನ್ನು ಸಭೆಯು ಅನುಮೋದಿಸಿತು.** |
| ವಿಷಯ 19 | **2020–21ನೇ ಸಾಲಿನ ಆಯವ್ಯಯ (Budget) ಪ್ರಸ್ತಾವನೆಗೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2020–21ನೇ ಸಾಲಿನ ಆಯವ್ಯಯ (Budget) ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **2020–21ನೇ ಸಾಲಿನ ಆಯವ್ಯಯ (Budget) ಪ್ರಸ್ತಾವನೆಗೆ ಘಟನೋತ್ತರ ಅನುಮೋದನೆ ನೀಡಿತು.** |
| ವಿಷಯ 20 | **ಸಂಸ್ಕೃತ ಸಂಶೋಧನ ಸಂಸತ್ನ ನೌಕರರುಗಳು ನೌಕರರ ಸಂಘವನ್ನು ರಚನೆ ಮಾಡಲು ಕೋರಿರುವ ಮನವಿಯ ಬಗೆಗೆ.**<br>ಸಂಸ್ಕೃತ ಸಂಶೋಧನ ಸಂಸತ್ನ ನೌಕರ ವರ್ಗದವರು ಸಂಸ್ಥೆಯ ಮೂಲ ಉದ್ದೇಶ ಹಾಗೂ ನಿಯಮಾನುಸಾರ ನೌಕರರುಗಳ ಹಿತರಕ್ಷಣೆ ಹಾಗೂ ಇತರ ಸಂವಿಧಾನಬದ್ಧ ಸೌಲಭ್ಯಗಳನ್ನು ಕಾನೂನಿನ ಅಡಿಯಲ್ಲಿ ಹೊಂದಲು ಸಂಸ್ಕೃತ ಸಂಶೋಧನ ಸಂಸತ್ನ ನೌಕರರ ಸಂಘವನ್ನು ರಚನೆ ಮಾಡಲು ದಿನಾಂಕ: 26.07.2019 ರಲ್ಲಿ ಮಾನ್ಯ ಕುಲಸಚಿವರಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮನವಿಯೊಡನೆ 29 ನೌಕರರುಗಳ ಸಹಿಯೊಂದಿಗೆ ಸಂಘದ ರಚನೆಯ ಮೂಲ ಉದ್ದೇಶದ ಕರಡನ್ನು ಸಹ ಲಗತ್ತಿಸಿರುತ್ತಾರೆ. ಮುಂದುವರೆದು, ಸ್ಥಾಪಕ ಪದಾಧಿಕಾರಿಗಳು ಹಾಗೂ ಸದಸ್ಯರಾಗಿ ಸರ್ವಾನುಮತದಿಂದ 9 ಸದಸ್ಯರುಗಳನ್ನು ಆಯ್ಕೆ ಮಾಡಿಕೊಂಡು ಅದರ ಪ್ರತಿಯನ್ನು ಲಗತ್ತಿಸಿದ್ದಾರೆ. ಈ ಸಂಬಂಧ ಸಂಸ್ಥೆಯ ಕುಲಸಚಿವರು ಸಂಸ್ಥೆಯ ಮೂಲ ಧ್ಯೇಯೋದ್ದೇಶಕ್ಕೆ ಹಾಗೂ ಸಂಸ್ಕೃತ ವಿಶ್ವವಿದ್ಯಾಲಯದ ಹಿತಾಸಕ್ತಿಗೆ ಧಕ್ಕೆ ಬಾರದ ರೀತಿಯಲ್ಲಿ, ಸಂಸ್ಥೆಯ/ಸರ್ಕಾರದ ನಿಯಮಾವಳಿಗಳ ಅಡಿಯಲ್ಲಿ ಮತ್ತು ಸಂಸ್ಥೆಯ ಕಾರ್ಯಚಟುವಟಿಕೆಗಳಿಗೆ ತೊಂದರೆಯಾಗದ ರೀತಿಯಲ್ಲಿ ಅನುಮತಿ ನೀಡಬಹುದೆಂದು ಅಭಿಪ್ರಾಯಪಡುತ್ತಾ ಮುಂದಿನ ತೀರ್ಮಾನಕ್ಕಾಗಿ ಮಾನ್ಯ ನಿರ್ದೇಶಕರಿಗೆ ಸಲ್ಲಿಸಿರುತ್ತಾರೆ. ಮಾನ್ಯ ನಿರ್ದೇಶಕರು ಅನುಮತಿ ನೀಡುವ ಮುನ್ನ ಪ್ರಶಾಸನ ಸಮಿತಿ ಸಭೆಯ ಒಪ್ಪಿಗೆ ಪಡೆದು ಅದರಂತೆ ಮುಂದುವರೆಯುವುದು ಸೂಕ್ತವೆಂದು ಆದೇಶ ನೀಡಿದ ಹಿನ್ನೆಲೆಯಲ್ಲಿ ಮುಂದಿನ ಸೂಕ್ತ ತೀರ್ಮಾನಕ್ಕಾಗಿ ಪ್ರಶಾಸನ ಸಮಿತಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸಂಸ್ಕೃತ ಸಂಶೋಧನ ಸಂಸತ್ನ ನೌಕರರುಗಳು ನೌಕರರ ಸಂಘವನ್ನು ರಚಿಸಲು ಪ್ರಶಾಸನ ಸಮಿತಿಯು ಒಪ್ಪಿದೆ.** |
| ವಿಷಯ 21 | **ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ತಿನಲ್ಲಿ ಶ್ರೀಮತಿ ಆರ್. ಶಶಿ W/o ಲೇಟ್ ಹೆಚ್. ರಮೇಶ ಇವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಕುರಿತು.**<br>ಶ್ರೀ ಹೆಚ್. ರಮೇಶ ಇವರು ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ತಿನಲ್ಲಿ ಯೋಜನೇತರ ವಿಭಾಗದ ವೇತನಾನುದಾನಕ್ಕೆ ಒಳಪಟ್ಟಂತೆ ಖಾಯಂ ಆಗಿ ಸ್ವೀಪರ್ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಸದರಿಯವರು ದಿನಾಂಕ: 25.02.2019ರಂದು ಅಕಾಲಿಕ ಮರಣಕ್ಕೆ ತುತ್ತಾದರು. ಇವರ ಧರ್ಮಪತ್ನಿಯಾದ ಶ್ರೀಮತಿ ಆರ್. ಶಶಿ ಇವರು ತಮ್ಮ ಯಜಮಾನರ ಹುದ್ದೆಗೆ ಅನುಕಂಪದ ಆಧಾರದ ಮೇಲೆ ನೇಮಕ ಮಾಡುವಂತೆ ಮನವಿ ಸಲ್ಲಿಸಿದ್ದರು. ಸದರಿಯವರು ಪಿ.ಯು.ಸಿ.ವರೆಗೆ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುತ್ತಾರೆ. ಹಾಗೆಯೇ ಸರ್ಕಾರವು ನಿಗದಿಪಡಿಸಿದ ವಯೋಮಾನದಲ್ಲಿ 10 ವರ್ಷಗಳವರೆಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ಹೊಂದಲು ರಿಯಾಯಿತಿಯನ್ನು ಸಹ ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ ಉದ್ಯೋಗ ಹೊಂದಲು ಅರ್ಹರಾಗಿರುತ್ತಾರೆ. ಈ ಸಂಬಂಧ ವಿಶ್ವವಿದ್ಯಾಲಯವು ದಿನಾಂಕ: 20.08.2019ರಲ್ಲಿ ಸರ್ಕಾರಕ್ಕೆ ಪತ್ರ ಬರೆದು ಸದರಿಯವರನ್ನು ಗಾರ್ಡ್‌ನರ್ ಹುದ್ದೆಗೆ ಅನುಕಂಪದ ಆಧಾರದ ಮೇಲೆ ನೇಮಕ ಮಾಡಲು ಆದೇಶ ಕೋರಿ ಪ್ರಸ್ತಾವನೆ ಸಲ್ಲಿಸಿತ್ತು. ಸರ್ಕಾರವು ಇಡಿ 173 ಯುಎನ್ಇ 2019, ದಿನಾಂಕ: 14.10.2019ರಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ ವಿಶ್ವವಿದ್ಯಾಲಯದ ಕುಲಪತಿಗಳು ಹಾಗೂ ಸಿಂಡಿಕೇಟ್ ನೇಮಕಾತಿ ಪ್ರಾಧಿಕಾರವಾಗಿರುವುದರಿಂದ ಚಾಲ್ತಿಯಲ್ಲಿರುವ ಅನುಕಂಪದ ನೇಮಕಾತಿ ನಿಯಮಗಳನ್ವಯ ಪರಿಶೀಲಿಸಿ ಶ್ರೀಮತಿ ಆರ್. ಶಶಿ ಇವರಿಗೆ ಉದ್ಯೋಗ ಕಲ್ಪಿಸುವ ಕುರಿತು ವಿಶ್ವವಿದ್ಯಾಲಯದ ಹಂತದಲ್ಲಿಯೇ ನಿಯಮಾನುಸಾರ ಕ್ರಮವಹಿಸುವಂತೆ ನಿರ್ದೇಶನ ನೀಡಿರುತ್ತಾರೆ. ಅದರಂತೆ ಅನುಕಂಪದ ಆಧಾರದ ಮೇಲೆ ಗಾರ್ಡ್‌ನರ್ ಹುದ್ದೆಗೆ ಮಾನ್ಯ ಕುಲಪತಿಗಳ ಒಪ್ಪಿಗೆ ಆದೇಶದಂತೆ ನೇಮಕ ಮಾಡಲಾಗಿದೆ. ಅನುಮೋದನೆಗಾಗಿ ಪ್ರಶಾಸನ ಸಮಿತಿಯ ಮುಂದೆ ಮಂಡಿಸಿದೆ. |
| ನಿರ್ಣಯ | **ಶ್ರೀಮತಿ ಆರ್. ಶಶಿ W/o ಲೇಟ್ ಹೆಚ್. ರಮೇಶ ಇವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಿರುವುದನ್ನು ಸಭೆಯು ಅನುಮೋದಿಸಿದೆ.** |

| | |
|---|---|
| ವಿಷಯ 22 | **ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನ ನೌಕರರುಗಳಿಗೆ ತುಟ್ಟಿಭತ್ಯೆಯನ್ನು ಮಂಜೂರು ಮಾಡಿರುವ ಬಗೆಗೆ.**<br>ಸ.ಆ.ಸಂಖ್ಯೆ: ಆಇ 15 ಎಸ್‌ಆರ್‌ಪಿ 2019, ದಿನಾಂಕ: 19.10.2019ರಲ್ಲಿ ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನ ನೌಕರರುಗಳಿಗೆ ದಿನಾಂಕ: 01.07.2019 ರಿಂದ ಜಾರಿಗೆ ಬರುವಂತೆ ಶೇ. 4.75%ನ್ನು ತುಟ್ಟಿಭತ್ಯೆಯನ್ನು ಮೂಲವೇತನದ ಶೇ. 6.50% ರಿಂದ ಶೇ. 11.25%ಕ್ಕೆ ಹೆಚ್ಚಿಸಿ ಆದೇಶ ಹೊರಡಿಸಿತ್ತು. ಅದರಂತೆ ಮಾನ್ಯ ಕುಲಪತಿಗಳ ಕಂಡಿಕೆ (6)ರ ಒಪ್ಪಿಗೆ ಆದೇಶ ದಿನಾಂಕ: 02.11.2019ರಂತೆ ನೌಕರರುಗಳಿಗೆ ತುಟ್ಟಿಭತ್ಯೆಯನ್ನು ಸರ್ಕಾರದ ನಿಯಮಾನುಸಾರ ಮಂಜೂರು ಮಾಡಿ ಆದೇಶವಾಗಿದ್ದಂತೆ ಬಿಡುಗಡೆ ಮಾಡಲಾಗಿದೆ. ಅದರಂತೆ ರೂ.1,54,415/-ನ್ನು ಬಿಡುಗಡೆ ಮಾಡಿದೆ. ಈ ಅಂಶವನ್ನು ಅನುಮೋದನೆಗಾಗಿ ಪ್ರಶಾಸನ ಸಮಿತಿಯ ಮುಂದೆ ಮಂಡಿಸಿದೆ. |
| ನಿರ್ಣಯ | **ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನ ನೌಕರರುಗಳಿಗೆ ತುಟ್ಟಿಭತ್ಯೆಯನ್ನು ಮಂಜೂರು ಮಾಡಿರುವುದಕ್ಕೆ ಘಟನೋತ್ತರ ಅನುಮತಿ ನೀಡಿದೆ.** |
| ವಿಷಯ 23 | **2020-21ನೇ ಸಾಲಿನಲ್ಲಿ ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನ ನೌಕರರುಗಳಿಗೆ ವಾರ್ಷಿಕಬಡ್ತಿಯನ್ನು ಮಂಜೂರು ಮಾಡುವ ಬಗೆಗೆ.**<br>ಸಂಸ್ಕೃತ ಸಂಶೋಧನ ಸಂಸತ್ – ಮೇಲುಕೋಟೆ, ಈ ಸಂಸ್ಥೆಯಲ್ಲಿ 33 ನೌಕರರುಗಳು ಸರ್ಕಾರದ ವೇತನಾನುದಾನಕ್ಕೆ ಒಳಪಟ್ಟು ವಾರ್ಷಿಕಬಡ್ತಿಯನ್ನು ಕಾಲಕಾಲದಲ್ಲಿ ಪಡೆಯುತ್ತಿದ್ದಾರೆ. ಸರ್ಕಾರದ ಆದೇಶದಂತೆ ಪ್ರತಿ ವರ್ಷ ಜನವರಿ ಮತ್ತು ಜುಲೈ ತಿಂಗಳುಗಳಲ್ಲಿ ವಾರ್ಷಿಕ ಬಡ್ತಿಯನ್ನು ಮಂಜೂರು ಮಾಡಬೇಕಿದೆ. ಅದರಂತೆ 2020-21ನೇ ಸಾಲಿನಲ್ಲಿ ವಾರ್ಷಿಕ ಬಡ್ತಿಯನ್ನು ಮಾನ್ಯ ಕುಲಪತಿಗಳ ಒಪ್ಪಿಗೆ ಆದೇಶದಂತೆ ಮಂಜೂರು ಮಾಡಿದೆ. ಪ್ರಶಾಸನ ಸಮಿತಿಯ ಗಮನಕ್ಕೆ ಈ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **2020-21ನೇ ಸಾಲಿನಲ್ಲಿ ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನ ನೌಕರರುಗಳಿಗೆ ವಾರ್ಷಿಕಬಡ್ತಿಯನ್ನು ಮಂಜೂರು ಮಾಡಿದ್ದಕ್ಕೆ ಸಭೆಯು ಘಟನೋತ್ತರ ಅನುಮತಿ ನೀಡಿತು.** |
| ವಿಷಯ 24 | **ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ತನ್ನು ವಿಶ್ವವಿದ್ಯಾಲಯವೇ ತನ್ನ ಅಧೀನ ಸಂಸ್ಥೆಯನ್ನಾಗಿ ಮುನ್ನಡೆಸುವ ಬಗೆಗೆ.**<br>ತೆಲಂಗಾಣ ರಾಜ್ಯದ ಸಂಸ್ಥೆಯಾದ M/s SRIMAD UBHAYA VEDANTA ACHARYA PEETHAM TRUST ಈ ಸಂಸ್ಥೆಯು ಸಂಸ್ಕೃತ ಸಂಶೋಧನ ಸಂಸತ್‌ನ್ನು ತನ್ನ ಸುಪರ್ದಿಗೆ ವಹಿಸಿಕೊಡುವಂತೆ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದ್ದಾರೆ. ಅದರಂತೆ ಮಾನ್ಯ ಅಪರ ಮುಖ್ಯಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 12.12.2019ರಂದು ಸಭೆ ಕರೆದಿದ್ದರು. ಇದರ ಜೊತೆಗೆ ಹಲವು ಖಾಸಗಿ ಸಂಘಸಂಸ್ಥೆಗಳು ಹಾಗೂ ಶಿಕ್ಷಣ ಸಂಸ್ಥೆಗಳು ವಿಶ್ವವಿದ್ಯಾಲಯದ ಮೂಲಕವೇ ಅಭಿವೃದ್ಧಿಪಡಿಸುವಂತೆಯೂ ಪತ್ರ ನೀಡಿದೆ. ಒಂದು ವೇಳೆ ಬೇರೆ ಸಂಸ್ಥೆಗಳಿಗೆ ಈ ಸಂಸ್ಥೆಯನ್ನು ವಹಿಸಿಕೊಟ್ಟಲ್ಲಿ ತಮಗೂ ಅವಕಾಶ ಕೊಡುವಂತೆ ಸರ್ಕಾರಕ್ಕೆ ಪ್ರಾರ್ಥನಾಪತ್ರವನ್ನು ಸಲ್ಲಿಸಿವೆ. ಸಭೆಯಲ್ಲಿ ಸಂಸ್ಥೆಯ ಕಾರ್ಯಚಟುವಟಿಕೆ ಹಾಗೂ ವಿಶ್ವವಿದ್ಯಾಲಯದ ಅಧೀನಕ್ಕೆ ವಹಿಸಿಕೊಂಡ ನಂತರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಅಗತ್ಯ ದಾಖಲೆಗಳ ಜೊತೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಮುಂದುವರೆದು ಈ ಸಂಸ್ಥೆಯನ್ನು 1976ರಲ್ಲಿ ಕರ್ನಾಟಕ ಸರ್ಕಾರವು ಸ್ಥಾಪಿಸಿದ್ದು ಸರ್ಕಾರದ ಅಧೀನ ಸಂಸ್ಥೆಯಾಗಿ ಪ್ರಸ್ತುತ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆಡಳಿತಕ್ಕೆ ಒಳಪಟ್ಟಿರುವ್ಯದರಿಂದ ಯಾವುದೇ ಖಾಸಗಿ ಸಂಸ್ಥೆಗಳಿಗೆ ನೀಡಲು ಕಾನೂನಾತ್ಮಕ ಅವಕಾಶವಿಲ್ಲವೆಂದು ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳು ಸರ್ಕಾರಕ್ಕೆ ಪತ್ರ ಸಲ್ಲಿಸಿದ್ದಾರೆ. ಈ ಅಂಶಗಳನ್ನು ಸಂಸ್ಕೃತ ಸಂಶೋಧನ ಸಂಸತ್‌ನ 3ನೇಯ ಅಭಿವೃದ್ಧಿ ಸಮಿತಿ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 27.12.2019ರಲ್ಲಿ ನಡೆಯಿತು. ಸಭೆಯ ವಿಷಯ ಸಂಖ್ಯೆ (11)ರಲ್ಲಿ ಚರ್ಚಿತವಾಗಿ ಈ ಕೆಳಕಂಡಂತೆ ನಿರ್ಣಯ ಕೈಗೊಂಡಿರುತ್ತದೆ. "ಈ ವಿಚಾರವು ತೀರಾ ಸೂಕ್ಷ್ಮ ಹಾಗೂ ಸರ್ಕಾರದ, ಸಂಸ್ಥೆಯ ಮತ್ತು ವಿಶ್ವವಿದ್ಯಾಲಯದ ಆಸ್ತಿಯ ರಕ್ಷಣೆ ಮತ್ತು ಪೋಷಣೆಯ ಅಂಶವಾಗಿರುವುದರಿಂದ ಸಭೆಯಲ್ಲಿ ಸಮಗ್ರವಾಗಿ ಹಾಗೂ ಕೂಲಂಕಷವಾಗಿ ಚರ್ಚಿಸಲಾಯಿತು. ಈ ಸಂಸ್ಥೆಯು ಸರ್ಕಾರದ 18 ಎಕರೆ ಜಮೀನಿನಲ್ಲಿ ಅನುದಾನದೊಡನೆ ಪ್ರಾರಂಭಗೊಂಡು 44 ವರ್ಷಗಳ ಕಾಲ ಸರ್ಕಾರವು ರಕ್ಷಿಸಿ, ಪೋಷಿಸಿ ಅಭಿವೃದ್ಧಿಪಡಿಸಿದೆ. ಈ ನಿಟ್ಟಿನಲ್ಲಿ ಸರ್ಕಾರದ ಸಂಸ್ಥೆಯಾದ ಸಂಸ್ಕೃತ ಸಂಶೋಧನ ಸಂಸತ್‌ನ ಆಡಳಿತ ನಿರ್ವಹಣೆ/ನಿಯಂತ್ರಣ ಮತ್ತು ಅನುದಾನಸಹಿತವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ ಅಧ್ಯಾಯ IIರ ಪರಿಚ್ಛೇದ 5(7)ರ ನಿಯಮದಡಿಯಲ್ಲಿ ವಿಶ್ವವಿದ್ಯಾಲಯದೊಂದಿಗೆ ಸಂಯೋಜಿಸಿ ಪೂರ್ಣ ಅಧೀನಕ್ಕೆ ಸರ್ಕಾರವು ಒಳಪಡಿಸಿದೆ.<br>ವಿಶ್ವವಿದ್ಯಾಲಯವು ದಿನಾಂಕ: 06.02.2016ರಿಂದ ಅಧೀನಕ್ಕೆ ವಹಿಸಿಕೊಂಡ ನಂತರ ಮೂಲ ಆಶಯಕ್ಕೆ ಧಕ್ಕೆಯಾಗದ ರೀತಿಯಲ್ಲಿ ಅಭಿವೃದ್ಧಿಪಡಿಸುತ್ತಾ ಸಾಗಿದೆ. ಪ್ರಸ್ತುತ ಸರ್ಕಾರದ ಹಾಗೂ ವಿಶ್ವವಿದ್ಯಾಲಯದ ಆಸ್ತಿಯಾಗಿದ್ದು ಯಾವುದೇ ಖಾಸಗಿ ಒಡೆತನಕ್ಕೆ ಈ ಸಂಸ್ಥೆಯನ್ನು ಹಸ್ತಾಂತರಿಸಲು ಅವಕಾಶವಿಲ್ಲ." ಈ ವಿಷಯವನ್ನು ಪ್ರಶಾಸನ ಸಮಿತಿಯ ಅನುಮೋದನೆಗೆ ಮಂಡಿಸಿದೆ. |

| | |
|---|---|
| ನಿರ್ಣಯ | **ಸಂಸ್ಕೃತ ಸಂಶೋಧನ ಸಂಸತ್ತನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ತನ್ನ ಅಧೀನದಲ್ಲಿಯೇ ನಡೆಸಿಕೊಂಡು ಹೋಗಲು ತೀರ್ಮಾನಿಸಿತು.**<br>**ಮಾನ್ಯ ಕುಲಪತಿಗಳು ಈ ಕೆಳಕಂಡ ಸದಸ್ಯರನ್ನೊಳಗೊಂಡ ಉಪಸಮಿತಿಯೊಂದನ್ನು ರಚಿಸಿ ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ತಿನ ಪರಿನಿಯಮ ಸಿದ್ಧಪಡಿಸಬಹುದೆಂದು ಸಭೆಯು ತೀರ್ಮಾನಿಸಿತು.**<br>**1. ಪ್ರೊ. ಮಲ್ಲೇಪುರಂ. ಜಿ. ವೆಂಕಟೇಶ್, ವಿಶ್ರಾಂತ ಕುಲಪತಿಗಳು – ಸದಸ್ಯರು**<br>**2. ಶ್ರೀ ಯು. ಬಿ ಉಳವಿ, ಬೆಂಗಳೂರು – ಸದಸ್ಯರು**<br>**3. ಶ್ರೀ ಆರ್. ಆರ್. ಕುಲಕರ್ಣಿ, ಬೆಂಗಳೂರು – ಸದಸ್ಯರು**<br>**4. ಡಾ. ಸಿ. ನಂಜುಂಡಯ್ಯ, ಪ್ರಶಾಸನ ಸಮಿತಿ ಸದಸ್ಯರು – ಸದಸ್ಯರು**<br>**4. ಶ್ರೀ ಎಸ್. ಕುಮಾರ್, ಸಂ.ಸಂ.ಸ ಮೇಲುಕೋಟೆ – ಸದಸ್ಯ ಸಂಚಾಲಕರು** |
| ವಿಷಯ 25 | **ಸಂಸ್ಕೃತ ಸಂಶೋಧನ ಸಂಸತ್ – ಮೇಲುಕೋಟೆ, ಇಲ್ಲಿನ 3ನೆಯ ಅಭಿವೃದ್ಧಿ ಸಮಿತಿ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗೆಗೆ.**<br>ದಿನಾಂಕ: 27.12.2019ರಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ ಆವರಣದಲ್ಲಿ ಸಭೆಯು ನಡೆದಿದ್ದು ಅದರ ನಡಾವಳಿಯನ್ನು ಅನುಮೋದನೆಗಾಗಿ ಪ್ರಶಾಸನ ಸಮಿತಿಯ ಮುಂದೆ ಮಂಡಿಸಿದೆ. |
| ನಿರ್ಣಯ | **ಘಟಕ ಸಂಶೋಧನ ಕೇಂದ್ರ ವಿಷಯವನ್ನು ಹೊರತುಪಡಿಸಿ ಉಳಿದ ವಿಷಯಗಳಿಗೆ ಅನುಮೋದನೆ ನೀಡಿದೆ.** |
| ವಿಷಯ 26 | **ಚಂಪೂ ಕಾವ್ಯಗಳ ವಾಚನವ್ಯಾಖ್ಯಾನ ಸರಣಿ ಕಾರ್ಯಕ್ರಮದ ಖರ್ಚುವೆಚ್ಚಗಳ ವಿವರಗಳಿಗೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**<br>ದಿನಾಂಕ: 17.10.2019 ರಿಂದ 28.11.2019ರವರೆಗೆ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಚಂಪೂ ಕಾವ್ಯಗಳ ವಾಚನವ್ಯಾಖ್ಯಾನ ಸರಣಿ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು. ಈ ಕಾರ್ಯಕ್ರಮದ ಒಟ್ಟು ಖರ್ಚು 81,246/– ರೂಗಳಾಗಿದ್ದು, 48,206/– ರೂಗಳನ್ನು ಕಾರ್ಯಕ್ರಮದ ಖರ್ಚುವೆಚ್ಚಗಳಿಗಾಗಿ ಈಗಾಗಲೇ ಪಾವತಿಸಲಾಗಿದೆ. ಚಿತ್ರೀಕರಣ ಮಾಡಿದ ಸಂಸ್ಥೆಗೆ 33,040/ ರೂಗಳನ್ನು ಪಾವತಿಸಬೇಕಾಗಿದ್ದು ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ. |
| ನಿರ್ಣಯ | **ವಿಶ್ವವಿದ್ಯಾಲಯದಲ್ಲಿ ನಡೆದ ಚಂಪೂ ಕಾವ್ಯಗಳ ವಾಚನವ್ಯಾಖ್ಯಾನ ಸರಣಿ ಕಾರ್ಯಕ್ರಮದ ಖರ್ಚುವೆಚ್ಚಗಳ ವಿವರಗಳಿಗೆ ಘಟನೋತ್ತರ ಅನುಮೋದನೆ ನೀಡಲಾಗಿದೆ.** |
| ವಿಷಯ 27 | **2019–20ನೇ ಸಾಲಿನ ಪಿಎಚ್.ಡಿ–ವಿದ್ಯಾವಾರಿಧಿ ತರಗತಿಯ ಅಂತ:ಶಾಸ್ತ್ರೀಯ ವಿಭಾಗದ ಆವೇದಿತ ಅಭ್ಯರ್ಥಿಗಳ ಅರ್ಹತಾ ಪರಿಶೀಲನಾ ಸಮಿತಿಯ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**<br>2019–20ನೇ ಸಾಲಿನ ಪಿಎಚ್.ಡಿ–ವಿದ್ಯಾವಾರಿಧಿ ಪ್ರವೇಶಾತಿಗಾಗಿ ಅಂತ:ಶಾಸ್ತ್ರೀಯ ವಿಭಾಗದಲ್ಲಿ ನಾಲ್ಕು ವಿದ್ಯಾರ್ಥಿಗಳು ಆವೇದನೆಯನ್ನು ಸಲ್ಲಿಸಿರುತ್ತಾರೆ. ಆ ವಿದ್ಯಾರ್ಥಿಗಳು ಪದವಿಗಳಲ್ಲಿ ಸಂಸ್ಕೃತ ವಿಷಯವನ್ನು ಅಧ್ಯಯನ ಮಾಡಿರುವುದಿಲ್ಲವಾದ್ದರಿಂದ ಅಂತ:ಶಾಸ್ತ್ರೀಯ ವಿಭಾಗದಲ್ಲಿ ಪ್ರವೇಶ ನೀಡುವ ಸಂಬಂಧ ಅಭ್ಯರ್ಥಿಗಳ ಸಂಸ್ಕೃತ ಹಿನ್ನೆಲೆಯನ್ನು ಅರ್ಜಿಗಳಲ್ಲಿ ಪರಿಶೀಲಿಸಿ ಕ್ರಮಕೈಗೊಳ್ಳುವುದಕ್ಕಾಗಿ ದಿನಾಂಕ: 19.12.2019ರಂದು ನಿಕಾಯಾಧ್ಯಕ್ಷರ ಸಭೆಯನ್ನು ಕರೆಯಲಾಯಿತು. ಈ ಸಭೆಯಲ್ಲಿ ಅಂತ:ಶಾಸ್ತ್ರೀಯ ವಿಭಾಗದಲ್ಲಿ ಆವೇದಿತ ಅಭ್ಯರ್ಥಿಗಳ ಪ್ರವೇಶ ಪರೀಕ್ಷೆಯ ವಿಷಯದಲ್ಲಿ ಈ ಕೆಳಕಂಡಂತೆ ನಿರ್ಣಯವನ್ನು ಕೈಗೊಳ್ಳಲಾಯಿತು.<br>**"ಸಂಸ್ಕೃತದ ಬೆಳವಣಿಗೆಗೆ ಅಂತ:ಶಾಸ್ತ್ರೀಯ ಅಧ್ಯಯನ ಹಾಗೂ ಸಂಶೋಧನೆಗಳು ಅವಶ್ಯಕವಾದುದರಿಂದ ಈ ವಿಷಯದಲ್ಲಿ ಆವೇದನೆ ಮಾಡಿರುವ ಅಭ್ಯರ್ಥಿಗಳ ಪದವಿಗಳಲ್ಲಿ ಸಂಸ್ಕೃತ ವಿಷಯವು ಇಲ್ಲದಿದ್ದರೂ, ವಾಕ್ಪರೀಕ್ಷೆ ಅಥವಾ ಗಂಥಪ್ರಕಾಶನ ಮುಂತಾದ ರೀತಿಗಳಿಂದ ಸಂಸ್ಕೃತದ ಪರಿಜ್ಞಾನವನ್ನು ಖಚಿತ ಪಡಿಸಿಕೊಂಡು ಪ್ರವೇಶ ನೀಡಬಹುದಾಗಿದೆ."** ಈ ಅಂಶಕ್ಕೆ ಪ್ರಶಾಸನ ಸಭೆಯ ಅನುಮೋದನೆಯನ್ನು ಕೋರಿದೆ. |
| ನಿರ್ಣಯ | **2019–20ನೇ ಸಾಲಿನ ಪಿಎಚ್.ಡಿ–ವಿದ್ಯಾವಾರಿಧಿ ತರಗತಿಯ ಅಂತ:ಶಾಸ್ತ್ರೀಯ ವಿಭಾಗದ ಆವೇದಿತ ಅಭ್ಯರ್ಥಿಗಳ ಅರ್ಹತಾ ಪರಿಶೀಲನಾ ಸಮಿತಿಯ ಸಭೆಯ ನಡಾವಳಿಯನ್ನು ಅನುಮೋದಿಸಲಾಗಿದೆ. ಈ ವಿದ್ಯಾರ್ಥಿಗಳಿಗೆ ಕೋರ್ಸ್ ವರ್ಕ್ ನಲ್ಲಿ ಸಂಸ್ಕೃತವನ್ನು ಒಂದು ಪತ್ಯವಾಗಿಸಲು ಕ್ರಮ ಕೈಗೊಳ್ಳಲು ಸಭೆಯು ಸೂಚಿಸಿದೆ.** |
| ವಿಷಯ 28 | **ಪಿಎಚ್.ಡಿ ವಿದ್ಯಾರ್ಥಿಗಳ ದಂಡ ಶುಲ್ಕವನ್ನು ಹೆಚ್ಚಿಸುವ ಬಗೆಗೆ.**<br>ಪಿಎಚ್.ಡಿ–ವಿದ್ಯಾರ್ಥಿಗಳ ವಾರ್ಷಿಕ ಶುಲ್ಕವನ್ನು ಸರಿಯಾದ ಸಮಯದಲ್ಲಿ ಪಾವತಿಸದ ವಿದ್ಯಾರ್ಥಿಗಳಿಗೆ ಈವರೆಗೆ ರೂ.100ರ ದಂಡಶುಲ್ಕವನ್ನು ವಿಧಿಸಲಾಗಿತ್ತು. ಸದರಿ ಮೊತ್ತವು ಅತ್ಯಂತ ಕಡಿಮೆಯಾದ ಕಾರಣ ಅದನ್ನು ರೂ.1000ಕ್ಕೆ ಹೆಚ್ಚಿಸಲು ಸಭೆಯಲ್ಲಿ ಕೋರಿದೆ. |
| ನಿರ್ಣಯ | **ಪಿಎಚ್.ಡಿ ವಿದ್ಯಾರ್ಥಿಗಳ ದಂಡ ಶುಲ್ಕವನ್ನು 100 ರೂಗಳಿಂದ 1000ಕ್ಕೆ ಹೆಚ್ಚಿಸಲು ಸಭೆಯು ಒಪ್ಪಿದೆ.** |
| ವಿಷಯ 29 | **ಶ್ರೀ ವೆಂಕಟನರಸಿಂಹಾಚಾರ್ಯರು, ಸಹ ಶಿಕ್ಷಕರು, ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಪಾಠಶಾಲೆ. ಇವರಿಗೆ ಸಾಹಿತ್ಯ ಗ್ರೇಡ್–1ರ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡುವ ಬಗೆಗೆ.**<br>ಪೂರ್ಣಪ್ರಜ್ಞ ವಿದ್ಯಾಪೀಠ ಆಡಳಿತ ಮಂಡಳಿಯವರ ವತಿಯಿಂದ ನಡೆಯುತ್ತಿರುವ ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಪಾಠಶಾಲೆಯಲ್ಲಿ ಮುಖ್ಯಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದ ಜಿ. ರಾಘವೇಂದ್ರ ಭಟ್ ಇವರಿಗೆ |

| | |
|---|---|
| | ದಿನಾಂಕ: 13.07.2016 ರಿಂದ ಅನ್ವಯವಾಗುವಂತೆ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಬಡ್ತಿ ನೀಡಿದ್ದರಿಂದ ಖಾಲಿಯಾಗಿರುವ ಮುಖ್ಯಶಿಕ್ಷಕ ಹುದ್ದೆಗೆ ಸಹಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ವೆಂಕಟನರಸಿಂಹಾಚಾರ್ಯ ಇವರನ್ನು ಮುಖ್ಯಶಿಕ್ಷಕರನ್ನಾಗಿ ದಿನಾಂಕ: 01.08.2016ರಿಂದ ಅನ್ವಯವಾಗುವಂತೆ ನೇಮಿಸಲಾಗಿತ್ತು. ಶ್ರೀ ವೆಂಕಟನರಸಿಂಹಚಾರ್ಯರವರು 16.05.1998ರಲ್ಲಿ ನೇಮಕಾತಿ ಹೊಂದಿದ್ದು ಇವರು ಎಸ್.ಎಸ್.ಎಲ್.ಸಿ. ಸಾಹಿತ್ಯ, ದ್ವೈತವೇದಾಂತ ವಿದ್ವತ್ ಉತ್ತಮಾ, ಎಂ.ಎ ಸಂಸ್ಕೃತ, ಬಿ.ಎಡ್ ವಿದ್ಯಾರ್ಹತೆಗಳನ್ನು ಹೊಂದಿರುತ್ತಾರೆ. ಇವರ ಮುಖ್ಯಶಿಕ್ಷಕ ಹುದ್ದೆಯ ನೇಮಕಾತಿಯನ್ನು ಅನುಮೋದಿಸಿ ಸಾಹಿತ್ಯ ಗ್ರೇಡ್–01ರ ವೇತನ ಶ್ರೇಣಿಯನ್ನು ನಿಗದಿಗೊಳಿಸಿ ಆದೇಶಿಸಲು ಕೋರಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಅಗತ್ಯ ಮಾಹಿತಿಗಳ ಸಹಿತ ಸರ್ಕಾರಕ್ಕೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆ ಬಗ್ಗೆ ಸರ್ಕಾರವು ವಿಶ್ವವಿದ್ಯಾಲಯದ ಹಂತದಲ್ಲೇ ತೀರ್ಮಾನ ತೆಗೆದುಕೊಂಡು ನಿಯಮಾನುಸಾರ ಮುಂದಿನ ಕ್ರಮ ವಹಿಸುವಂತೆ ನಿರ್ದೇಶಿಸಿರುತ್ತದೆ. ಈ ಅಂಶಕ್ಕೆ ಸಭೆಯಲ್ಲಿ ನಿರ್ಣಯವನ್ನು ಕೋರಿದೆ. |
| ನಿರ್ಣಯ | **ಶ್ರೀ ವೆಂಕಟನರಸಿಂಹಾಚಾರ್ಯರು, ಸಹ ಶಿಕ್ಷಕರು, ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಪಾಠಶಾಲೆ. ಇವರಿಗೆ ಸಾಹಿತ್ಯ ಗ್ರೇಡ್–1ರ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡಲು ಸಭೆಯು ಅನುಮತಿ ನೀಡಿತು.** |
| **ವಿಷಯ 30** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ "ಶುಲ್ಕ ಪರಿಷ್ಕರಣಾ ಸಮಿತಿ" ರಚಿಸುವ ಬಗೆಗೆ.**<br>ವಿಶ್ವವಿದ್ಯಾಲಯದ ಅಡಿಯಲ್ಲಿ ಪ್ರಥಮಾ. ಕಾವ್ಯ, ಸಾಹಿತ್ಯ, ವೇದ ಪ್ರವೇಶ, ವೇದ ಮೂಲ, ವಿದ್ವನ್ಮಧ್ಯಮಾ, ವಿದ್ವದುತ್ತಮಾ, ಬಿ.ಎ ಸಂಸ್ಕೃತ, ಎಂ.ಎ ಸಂಸ್ಕೃತ, ಸರ್ಟಿಫಿಕೇಟ್, ಡಿಪ್ಲೊಮಾ, ಎಂ.ಫಿಲ್ ಮತ್ತು ಪಿಎಚ್.ಡಿ ಕೋರ್ಸ್‌ಗಳು ನಡೆಯುತ್ತವೆ. ಈ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಶುಲ್ಕವನ್ನು ನಿರ್ಧಾರ ಮಾಡಲು ಮತ್ತು ಕಾಲಕಾಲಕ್ಕೆ ಪರಿಷ್ಕರಿಸಲು ಈವರೆಗೆ ಯಾವುದೇ ಸಮಿತಿ ಇರುವುದಿಲ್ಲ. ಆದ್ದರಿಂದ ಎಲ್ಲ ವಿಶ್ವವಿದ್ಯಾಲಯಗಳಲ್ಲಿರುವಂತೆ ನಮ್ಮ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿಯೂ "ಶುಲ್ಕ ಪರಿಷ್ಕರಣಾ ಸಮಿತಿ" ರಚಿಸಬಹುದಾಗಿದ್ದು ಇದನ್ನು ಸಭೆಯಲ್ಲಿ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **"ಶುಲ್ಕ ಪರಿಷ್ಕರಣಾ ಸಮಿತಿ"ಯನ್ನು ಈ ಕೆಳಕಂಡಂತೆ ರಚಿಸಲು ಸಭೆಯು ಒಪ್ಪಿದೆ.**<br>1. **ಡಾ. ಸಿದ್ದಲಿಂಗ ಶಿವಚಾರ್ಯ ಮಹಾಸ್ವಾಮಿಗಳು, ಪ್ರಶಾಸನ ಸಮಿತಿ ಸದಸ್ಯರು – ಅಧ್ಯಕ್ಷರು**<br>2. **ಡಾ. ಸಿ. ನಂಜುಂಡಯ್ಯ ಪ್ರಶಾಸನ ಸಮಿತಿ ಸದಸ್ಯರು – ಸದಸ್ಯರು**<br>3. **ಶ್ರೀಮತಿ ಶೈಲಶ್ರೀ, ಪ್ರಶಾಸನ ಸಮಿತಿ ಸದಸ್ಯರು – ಸದಸ್ಯರು**<br>4. **ಪರೀಕ್ಷಾ ನಿಯಂತ್ರಕರು, ಕಸಂವಿ – ಸದಸ್ಯರು**<br>5. **ನಿರ್ದೇಶಕರು, ಅಧ್ಯಯನಾಂಗ – ಸದಸ್ಯ ಸಂಚಾಲಕರು** |
| **ವಿಷಯ 31** | **ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು– ಗೋಕರ್ಣ ಇಲ್ಲಿ ಜವಾನ ಮತ್ತು ದ್ವಿತೀಯ ದರ್ಜೆ ಸಹಾಯಕರನ್ನು ನೇಮಿಸುವ ಬಗೆಗೆ.**<br>ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು– ಗೋಕರ್ಣ ಇಲ್ಲಿ ಎಲ್ಲಾ ಬೋಧಕ ಸಿಬ್ಬಂದಿಗಳು ನಿವೃತ್ತರಾಗಿದ್ದು, ದ್ವಿತೀಯ ದರ್ಜೆ ಸಹಾಯಕರೂ ನಿವೃತ್ತಿ ಹೊಂದಿರುತ್ತಾರೆ. ಜುಲೈ ತಿಂಗಳಿನಲ್ಲಿ ಓರ್ವ ಜವಾನನು ನಿವೃತ್ತಿ ಹೊಂದಿದ್ದು ದ್ವಿತೀಯ ದರ್ಜೆ ಸಹಾಯಕರನ್ನು ಹಾಗೂ ಒಬ್ಬ ಜವಾನರನ್ನು ನೇಮಕಗೊಳಿಸುವಂತೆ ಕೋರಿ ಪ್ರಾಚಾರ್ಯರು ಪತ್ರಿಸಿರುತ್ತಾರೆ. ಈ ಮಹಾವಿದ್ಯಾಲಯದ ಆಡಳಿತವು ಕಸಂವಿಯ ಅಡಿಯಲ್ಲಿರುವುದರಿಂದ ನಿಯೋಜನೆ ಮೇರೆಗೆ ವಿಶ್ವವಿದ್ಯಾಲಯದಿಂದ ನಿಯೋಜಿಸಲು ಕೋರಿದ್ದಾರೆ. ಮುಂದಿನ ನಿರ್ಣಯಕ್ಕಾಗಿ ಪ್ರಶಾಸನ ಸಮಿತಿ ಸಭೆಯಲ್ಲಿ ಮಂಡಿಸಿದೆ. |
| ನಿರ್ಣಯ | **ವಿಶ್ವವಿದ್ಯಾಲಯದ 'ಡಿ'ಗ್ರೂಪ್ ನೌಕರ (ಜವಾನ) ಶ್ರೀ ಪ್ರಸನ್ನಕುಮಾರ್ ಅವರನ್ನು ನಿಯೋಜಿಸಲು ಸಭೆಯು ತೀರ್ಮಾನಿಸಿತು.** |
| | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳು** |
| ವಿಷಯ 01 | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವೃಂದ ಮತ್ತು ನೇಮಕಾತಿ ಪರಿನಿಯಮಕ್ಕೆ ಅನುಮೋದನೆ ನೀಡುವ ಬಗೆಗೆ.**<br>ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವೃಂದ ಮತ್ತು ನೇಮಕಾತಿ ಪರಿನಿಯಮಾವಳಿಗೆ ಸಿಆಸು(ಸೇವಾ ನಿಯಮಗಳು–ಡಿ) ಇಲಾಖೆಯ ಅಭಿಪ್ರಾಯದ ಮೇರೆಗೆ ನೇರ ನೇಮಕಾತಿ ಮತ್ತು ಮುಂಬಡ್ತಿ ಶೀರ್ಷಿಕೆಗಳ ಅಡಿಯಲ್ಲಿ ಕೆಲವು ಬದಲಾವಣೆಗಳನ್ನು ಸೂಚಿಸಲಾಗಿತ್ತು. ಇದನ್ನು ವಿಶ್ವವಿದ್ಯಾಲಯದ ವಿವಿಧ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾದ ಹಿನ್ನೆಲೆಯಲ್ಲಿ ಈ ವಿಷಯವನ್ನು ಲಗತ್ತುಗಳೊಂದಿಗೆ ಸಭೆಯಲ್ಲಿ ಮಂಡಿಸಿದೆ. |
| ನಿರ್ಣಯ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವೃಂದ ಮತ್ತು ನೇಮಕಾತಿ ಪರಿನಿಯಮಕ್ಕೆ ಪ್ರಶಾಸನ ಸಮಿತಿಯು ಅನುಮೋದನೆ ನೀಡಿತು.** |
| ವಿಷಯ 02 | **ದಿನಾಂಕ: 19.07.2019ರಿಂದ 20.09.2019ರ ವರೆಗೆ ನಡೆದ ಸಂಸ್ಕೃತದ ಪಂಚ ಮಹಾಕಾವ್ಯಗಳ ವಾಚನ–ವ್ಯಾಖ್ಯಾನ ಮಾಲಿಕೆಯ ಖರ್ಚುವೆಚ್ಚಕ್ಕೆ ಅನುಮೋದನೆ ನೀಡುವ ಬಗೆಗೆ.**<br>ದಿನಾಂಕ: 19.07.2019ರಿಂದ 20.09.2019ರ ವರೆಗೆ ನಡೆದ ಸಂಸ್ಕೃತದ ಪಂಚ ಮಹಾಕಾವ್ಯಗಳ ವಾಚನ–ವ್ಯಾಖ್ಯಾನ ಮಾಲಿಕೆಗೆ ಒಟ್ಟು ರೂ.1,00,000/– (ಒಂದು ಲಕ್ಷ) ಗಳನ್ನು ವ್ಯಯವಾಗುವುದೆಂದು ಅಂದಾಜಿಸಲಾಗಿತ್ತು. ಸದರಿ ಸರಣಿ ಕಾರ್ಯಕ್ರಮದಲ್ಲಿ ರೂ.1,15,907/– ಖರ್ಚಾಗಿರುತ್ತದೆ. ಹೆಚ್ಚುವರಿಯಾಗಿ |

| | |
|---|---|
| | ವ್ಯಯವಾದ ಮೊತ್ತ ರೂ.15, 907/-ಕ್ಕೆ ಘಟನೋತ್ತರ ಅನುಮತಿ ಕೋರಿ ಸಭೆಯಲ್ಲಿ ಮಂಡಿಸಿದೆ. |
| ನಿರ್ಣಯ | **ಸಂಸ್ಕೃತದ ಪಂಚ ಮಹಾಕಾವ್ಯಗಳ ವಾಚನ-ವ್ಯಾಖ್ಯಾನ ಮಾಲಿಕೆಯಲ್ಲಿ ಹೆಚ್ಚುವರಿಯಾಗಿ ಖರ್ಚಾದ ಮೊತ್ತಕ್ಕೆ ಸಭೆಯು ಅನುಮೋದನೆ ನೀಡಿದೆ.** |
| ವಿಷಯ 03 | **ರಾಜ್ಯಸ್ತರದ ಸ್ಪರ್ಧೆಗಳ ಖರ್ಚು-ವೆಚ್ಚಕ್ಕೆ ಅನುಮೋದನೆ ನೀಡುವ ಬಗೆಗೆ.**<br>ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ- ನವದೆಹಲಿಯ ವತಿಯಿಂದ ಪ್ರತಿವರ್ಷವೂ ಆಯೋಜಿಸಲ್ಪಡುವ ರಾಷ್ಟ್ರಸ್ತರೀಯ ಸ್ಪರ್ಧೆಗಳ ಪೂರ್ವಭಾವಿಯಾಗಿ ರಾಜ್ಯಸ್ತರೀಯ ಸ್ಪರ್ಧೆಗಳನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವತಿಯಿಂದ ಕರ್ನಾಟಕ ರಾಜ್ಯದಲ್ಲಿ ಆಯೋಜಿಸಲಾಗುವುದು ಸರಿಯಷ್ಟೆ. ಈ ಹಿನ್ನೆಲೆಯಲ್ಲಿ ಈ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಪ್ರಯಾಣ ಭತ್ಯೆ ಮತ್ತು ವಾಸ ವ್ಯವಸ್ಥೆ ಇತ್ಯಾದಿಗಳಿಗಾಗಿ ವಿಶ್ವವಿದ್ಯಾಲಯದಿಂದ 4.25 ಲಕ್ಷ ರೂಗಳನ್ನು ಮುಂಗಡವಾಗಿ ಪಡೆಯಲಾಗಿತ್ತು. ಇದರಲ್ಲಿ 3.79 ಲಕ್ಷಗಳು ವ್ಯಯವಾಗಿದ್ದು, 46,000 ರೂಗಳನ್ನು ವಿಶ್ವವಿದ್ಯಾಲಯದ ಖಾತೆಗೆ ಜಮಾ ಮಾಡಲಾಗಿದೆ. ಈ ಮೊತ್ತಕ್ಕೆ ಘಟನೋತ್ತರ ಅನುಮತಿ ಕೋರಿ ಪ್ರಶಾಸನ ಸಮಿತಿ ಸಭೆಯಲ್ಲಿ ಮಂಡಿಸಿದೆ. |
| ನಿರ್ಣಯ | **ರಾಜ್ಯಸ್ತರದ ಸ್ಪರ್ಧೆಗಳ ಖರ್ಚು-ವೆಚ್ಚ ರೂ 3.79 ಲಕ್ಷ ರೂಗಳಿಗೆ ಸಭೆಯು ಘಟನೋತ್ತರ ಅನುಮೋದನೆ ನೀಡಿತು.** |
| ವಿಷಯ 04 | **ಕು. ಎಂ.ಡಿ ಶಿವರಂಜಿನಿ ಇವರಿಗೆ ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ತಿನಲ್ಲಿ ಉದ್ಯೋಗ ಕಲ್ಪಿಸುವ ಬಗೆಗೆ.**<br>ಸನ್ಮಾನ್ಯ ಶ್ರೀ ಸಿ. ಎಸ್ ಪುಟ್ಟರಾಜು, ಮಾನ್ಯ ಶಾಸಕರು, ಮೇಲುಕೋಟೆ ವಿಧಾನಸಭಾ ಕ್ಷೇತ್ರ ಇವರು ಕು. ಎಂ.ಡಿ ಶಿವರಂಜಿನಿ ಇವರಿಗೆ ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ತಿನಲ್ಲಿ ಇವರ ವಿದ್ಯಾರ್ಹತೆಗೆ ಯೋಗ್ಯವಾದ ಯಾವುದಾದರೂ ಹುದ್ದೆಯನ್ನು ಕಲ್ಪಿಸಿಕೊಡಲು ಕೋರಿರುತ್ತಾರೆ. ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಸಂಸತ್ತು ವಿಶ್ವವಿದ್ಯಾಲಯದ ಆಡಳಿತಕ್ಕೆ ಒಳಪಟ್ಟಿರುವುದರಿಂದಲೂ, ಸದರಿ ಅಭ್ಯರ್ಥಿಯು ಗಣಕ ಯಂತ್ರ ತರಬೇತಿ ಹೊಂದಿರುವುದರಿಂದಲೂ ಮತ್ತು ಸ್ಥಳೀಯ ಶಾಸಕರ ಬೆಂಬಲ ಅವಶ್ಯವಿರುವುದರಿಂದಲೂ ಕುಮಾರಿ ಶಿವರಂಜಿನಿಯವರಿಗೆ ತಾತ್ಕಾಲಿಕವಾಗಿ ನಿಗದಿತ ವೇತನದೊಂದಿಗೆ ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ತಿನಲ್ಲಿ ಉದ್ಯೋಗ ಕಲ್ಪಿಸುವುದು ಅವಶ್ಯವಾಗಿರುತ್ತದೆ. ಈ ವಿಷಯಕ್ಕೆ ಅನುಮತಿ ಕೋರಿ ಪ್ರಶಾಸನ ಸಮಿತಿ ಸಭೆಯಲ್ಲಿ ಮಂಡಿಸಿದೆ. |
| ನಿರ್ಣಯ | **ಹೊರಗುತ್ತಿಗೆ ಆಧಾರದ ಮೇಲೆ ಕು. ಎಂ.ಡಿ ಶಿವರಂಜಿನಿ ಇವರಿಗೆ ಅಲ್ಪಾವಧಿಯ ಉದ್ಯೋಗ ನೀಡಲು (3 ತಿಂಗಳು ಮಾತ್ರ) ಪ್ರಶಾಸನ ಸಮಿತಿ ಸಭೆಯು ಸಮ್ಮತಿಸಿದೆ.** |
| ವಿಷಯ 05 | **Amazon Web Service ಕಡೆಯಿಂದ Cloud Space server ಅನ್ನು ಖರೀದಿಸಿದ್ದಕ್ಕೆ ಘಟನೋತ್ತರ ಅನುಮತಿ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಶೈಕ್ಷಣಿಕ ವಿಭಾಗದವರು Develop ಮಾಡಿರುವ ಹಾಗೂ ಮಾಡುತ್ತಿರುವ ಹಲವು ರಿಸರ್ಚ್ ಪ್ರಾಜೆಕ್ಟ್‌ಗಳನ್ನು ಆನ್‌ಲೈನ್‌ನಲ್ಲಿ Host ಮಾಡಲು serverನ ಅವಶ್ಯಕತೆ ಇದ್ದು ಈಗಾಗಲೇ ಕುಲಪತಿಗಳಿಂದ ಅನುಮತಿ ಪಡೆದು ಜುಲೈ-2019 ತಿಂಗಳಿನಲ್ಲಿ Amazon Web Service ಕಡೆಯಿಂದ Cloud Space server ಅನ್ನು ಖರೀದಿಸಲಾಗಿದೆ ಹಾಗೂ ಜುಲೈ, ಆಗಸ್ಟ್, ಸೆಪ್ಟೆಂಬರ್‌ನಲ್ಲಿ ಒಟ್ಟು ರೂ 10,185/- ಗಳನ್ನು ಮತ್ತು ಅಕ್ಟೋಬರ್ ತಿಂಗಳಿನಿಂದ ವಾರ್ಷಿಕವಾಗಿ ರೂ 19,235/- ಬಿಲ್ನ್ನು ಪಾವತಿಸಲಾಗಿದೆ. ಈ ಮೊತ್ತಕ್ಕೆ ಘಟನೋತ್ತರ ಅನುಮತಿ ಕೋರಿ ಪ್ರಶಾಸನ ಸಮಿತಿ ಸಭೆಯಲ್ಲಿ ಮಂಡಿಸಿದೆ. |
| ನಿರ್ಣಯ | **Amazon Web Service ಕಡೆಯಿಂದ Cloud Space server ಅನ್ನು ಖರೀದಿಸಿದ್ದಕ್ಕೆ ಸಭೆಯು ಘಟನೋತ್ತರ ಅನುಮತಿ ನೀಡಿದೆ.** |
| ವಿಷಯ 06 | **ಪ್ರಸನ್ನ ಕುಮಾರ ಪಿ. ಜವಾನ (ಡಿ-ಗ್ರೂಪ್) ಇವರನ್ನು ಕರ್ತವ್ಯದ ಮೇಲೆ ಹಾಜರುಪಡಿಸಿಕೊಳ್ಳುವ ಬಗೆಗೆ.**<br>ಪ್ರಸನ್ನ ಕುಮಾರ ಪಿ. ಜವಾನ (ಡಿ-ಗ್ರೂಪ್) ಇವರು ದಿನಾಂಕ: 04.05.2018ರಂದು ಕಛೇರಿ ಅವಧಿಯಲ್ಲಿ ಮದ್ಯಪಾನ ಮಾಡಿ ಅನುಚಿತವಾಗಿ ವರ್ತಿಸಿದ ಕಾರಣ ಇವರನ್ನು ಇಲಾಖಾ ವಿಚಾರಣೆ ಕಾಯ್ದಿರಿಸಿ ದಿನಾಂಕ: 05.05.2018ರಂದು ಕರ್ತವ್ಯದಿಂದ ಅಮಾನತ್ತುಗೊಳಿಸಲಾಗಿತ್ತು. ದಿನಾಂಕ: 18.02.2019ರಂದು ಇಲಾಖಾ ವಿಚಾರಣೆ ನಡೆಸಲಾಗಿ ಇನ್ನು ಮುಂದೆ ಅನುಚಿತ ವರ್ತನೆ ನಡೆಸುವುದಿಲ್ಲ ಮತ್ತು ಮದ್ಯಪಾನ ಮಾಡುವುದಿಲ್ಲವೆಂದು ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರ ಬರೆದುಕೊಟ್ಟಲ್ಲಿ ಪುನಃ ಕರ್ತವ್ಯದ ಮೇಲೆ ಹಾಜರುಪಡಿಸಿಕೊಳ್ಳುವುದಾಗಿ ತಿಳಿಸಲಾಗಿತ್ತು. ಅದರಂತೆ ಪ್ರಸನ್ನ ಕುಮಾರ ಪಿ. ಇವರು ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರ ಬರೆದು ನೀಡಿರುತ್ತಾರೆ. ಆದ್ದರಿಂದ ಇವರನ್ನು ಕರ್ತವ್ಯದ ಮೇಲೆ ಹಾಜರುಪಡಿಸಿಕೊಳ್ಳಲು ಅನುಮತಿ ಕೋರಿ ಪ್ರಶಾಸನ ಸಮಿತಿಯಲ್ಲಿ ವಿಷಯ ಮಂಡಿಸಿದೆ. |
| ನಿರ್ಣಯ | **ಪ್ರಸನ್ನ ಕುಮಾರ ಪಿ. ಜವಾನ (ಡಿ-ಗ್ರೂಪ್) ಇವರನ್ನು ನಿಯಮಾನುಸಾರ ಕರ್ತವ್ಯದ ಮೇಲೆ ಹಾಜರುಪಡಿಸಿಕೊಂಡು ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಮಹಾವಿದ್ಯಾಲಯ, ಗೋಕರ್ಣ ಇಲ್ಲಿಗೆ ನಿಯೋಜಿಸಲು ಸಭೆಯು ತೀರ್ಮಾನಿಸಿತು.** |

| | |
|---|---|
| ವಿಷಯ 07 | **"ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕ ಆಧುನಿಕ ಲೇಖಕರ ಕೊಡುಗೆ" ಯೋಜನೆಯನ್ನು ಬಗೆಗೆ.**<br>ಪ್ರೊ. ಚಂದ್ರಮೌಳಿ ಎಸ್. ನಾಯ್ಕರ, ನಿವೃತ್ತ ಕುಲಸಚಿವರು, ಧಾರವಾಡ, ಇವರು "ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಆಧುನಿಕ ಲೇಖಕರ ಕೊಡುಗೆ" ಯೋಜನೆಯನ್ನು ಕೈಗೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಇಂತಹ ವಿಶಿಷ್ಟ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಒಪ್ಪಿತು. ಹಾಗೂ ಈ ಕಾರ್ಯಕ್ಕಾಗಿ ಪ್ರೊ. ಚಂದ್ರಮೌಳಿ ಎಸ್. ನಾಯ್ಕರ್ ಅವರಿಗೆ ರೂ. 2 ಲಕ್ಷವನ್ನು ಹಂತ ಹಂತವಾಗಿ ನೀಡಲು ಸಭೆಯು ತೀರ್ಮಾನಿಸಿತು.** |
| ವಿಷಯ 08 | **ವಿಶ್ವವಿದ್ಯಾಲಯದ "ಸಂಸ್ಥಾಪನ ದಿನಾಚರಣೆ" ಸಂದರ್ಭದಲ್ಲಿ ಹಿರಿಯ ಸಂಸ್ಕೃತ ವಿದ್ವಾಂಸರನ್ನು ಸನ್ಮಾನಿಸುವ ಬಗ್ಗೆ**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪ್ರತಿವರ್ಷ ನಡೆಸುವ ಸಂಸ್ಥಾಪನ ದಿನಾಚರಣೆಯ ಸಂದರ್ಭದಲ್ಲಿ 4 ಹಿರಿಯ ಸಂಸ್ಕೃತ ವಿದ್ವಾಂಸರನ್ನು ಸನ್ಮಾನಿಸಲು ಪ್ರಶಾಸನ ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಒಪ್ಪಿಗೆ ಸೂಚಿಸಿತು.** |

**ಪ್ರೊ. ವೀರನಾರಾಯಣ ಎನ್. ಕೆ ಪಾಂಡುರಂಗಿ**

**ಕುಲಸಚಿವರು (ಪ್ರ)**

**ಪ್ರೊ. ವಿ. ಗಿರೀಶ್ ಚಂದ್ರ**

**ಕುಲಪತಿಗಳು (ಪ್ರ)**